**ಸಾಕ್ಷಿಯನ್ನು ದಿಃ 20.02.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಆರ್.ಎನ್ ವಕೀಲರಿಂದಃ**

ನನಗೆ ವಾದಿ, ವಾದಿಯ ಮಗ ಸೋಮಶೇಖರ್ ಗೊತ್ತಿಲ್ಲ. ವಾದಿ ದಾವ ಆಸ್ತಿ ತಮ್ಮದು ಎಂದು ಹೇಳಿ ದಾವ ಹಾಕಿರುತ್ತಾರೆ. ವಾದಿ ಹಾಕಿರುವ ದಾವ ಸ್ವತ್ತು ಸರ್ವೇ ನಂಬರ್ ಗೊತ್ತಿಲ್ಲ. ದಾವ ಆಸ್ತಿ ಕ್ಯಾತಮಾರನಹಳ್ಳಿಯಲ್ಲಿ ಇದೆ ಎಂದು ವಾದಿ ಹೇಳಿರುತ್ತಾರೆ. ನಾವು ಎರಗನಹಳ್ಳಿಯಲ್ಲಿ ಸರ್ವೇ ನಂಬರ್ 55 ರಿಂದ 60 ರಲ್ಲಿ ಖರೀದಿ ಮಾಡಿರುತ್ತೇವೆ. ನಾವು 2006 ರಲ್ಲಿ ಖರೀದಿ ಮಾಡಿದ್ದು ಅದಕ್ಕೂ ಒಂದು ವಾರದ ಮೊದಲು ನಮ್ಮ ಆಸ್ತಿಯನ್ನು ಹೋಗಿ ನೋಡಿದ್ದೇವು. ನಾವು ಮೈಸೂರಿನಲ್ಲಿ 25 ವರ್ಷಗಳಿಂದ ಇರುತ್ತೇವೆ. ಸರ್ವೇ ನಂಬರ್ 176 ಕ್ಯಾತಮಾರನಹಳ್ಳಿ ಆಸ್ತಿಯಲ್ಲಿ ನಮಗೆ ಹಕ್ಕು ಇಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಹಾಜರು ಮಾಡಿದ ದಾಖಲೆಗಳು ಸರ್ವೇ ನಂಬರ್ 176 ಕ್ಕೆ ಸಂಬಂಧಪಟ್ಟಿಲ್ಲ. ನಾನು ಬಿ.ಕಾಂ., ಓದಿರುತ್ತೇನೆ. ಟೀಚರ್ ಲೇಔಟ್ ಕ್ಯಾತಮಾರನಹಳ್ಳಿಯಲ್ಲಿ ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಖರೀದಿಸಿದ ಆಸ್ತಿಯ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ಖಾಸಗಿ ಆಸ್ತಿ, ಉತ್ತರಕ್ಕೆಃ ನಿವೇಶನ ಸಂಖ್ಯೆ 50 ಮತ್ತು ದಕ್ಷಿಣಕ್ಕೆಃ ನಿವೇಶನ ಸಂಖ್ಯೆ 22 ಬರುತ್ತದೆ. ಪಶ್ಚಿಮಕ್ಕೆ ಖಾಸಗಿ ಆಸ್ತಿ ಯಾರದೂ ಎಂದು ಗೊತ್ತಿಲ್ಲ. ವಾದಿ ಹಾಕಿರುವ ದಾವದ ವಿಷಯ ಓದಿ ತಿಳಿದುಕೊಂಡಿಲ್ಲ. ನಿಡಿ. 72 ಮತ್ತು 76 ರಲ್ಲಿ ಪಶ್ಚಿಮದ ಚಕ್ಕುಬಂಧಿ ಬೇರೆ ಬೇರೆ ಇದೆ ಎಂದರೆ ಗೊತ್ತಿಲ್ಲ. ನಾನು ಪ್ರಮಾಣ ಪತ್ರದಲ್ಲಿ ಹೇಳಿದ ಅಸಲು ದಾವಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಸದರಿ ದಾವೆಗಳ ದಾಖಲೆಗಳನ್ನು ನೋಡಿರುತ್ತೇನೆ, ಈಗ ನೆನಪಿಲ್ಲ ಅದರ ವಿವರಗಳು ಗೊತ್ತಿಲ್ಲ. ನಮಗೆ ಮಾರಾಟ ಮಾಡಿದ ಲಕ್ಷ್ಮಿ ಯವರಿಂದ ಸದರಿ ದಾವಗಳ ದಾಖಲೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ದಾವೆಗಳನ್ನು ಈ ದಾವೆಯ ವಾದಿ ಪಕ್ಷಗಾರ ಎಂದರೆ ಗೊತ್ತಿಲ್ಲ. ನನ್ನ ನಿವೇಶನದ ಚಕ್ಕುಬಂದಿ ಪೂರ್ವದ ರಸ್ತೆ ರಾಜಕುಮಾರ ರಸ್ತೆ ಇರುತ್ತದೆ. ಎರಗನಹಳ್ಳಿ ಮತ್ತು

ಕ್ಯಾತಮಾರನಹಳ್ಳಿ ಗಡಿ ಈ ರಸ್ತೆ ಯಾವ ಭಾಗಕ್ಕೆ ಬರುತ್ತದೆ ಎಂದು ಗೊತ್ತಿಲ್ಲ. ಸದರಿ ಗ್ರಾಮಗಳ ಗಡಿ ರಾಜಕುಮಾರ ರಸ್ತೆ ಪೂರ್ವಕ್ಕೆ ಇದೆ ಎಂದರೆ ಗೊತ್ತಿಲ್ಲ. ನನಗೆ ಮಂಜೂರಾಗಿರುವ ನಿವೇಶನ ದಾವ ಸ್ವತ್ತಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಪ್ಪು ಮಾಹಿತಿ ಕೊಟ್ಟಿದ್ದು 1 ನೇ ಪ್ರತಿವಾದಿಯ ನಿವೇಶನಗಳು ರಾಜಕುಮಾರ ರಸ್ತೆಯ ಪಶ್ಚಿಮಕ್ಕೆ ಇಲ್ಲ ಎಂದರೆ ಸರಿಯಲ್ಲ. ರಾಜಕುಮಾರ ರಸ್ತೆಯ ಪಶ್ಚಿಮಕ್ಕೆ 1 ನೇ ಪ್ರತಿವಾದಿ ಸೊಸೈಟಿ ಯಾವುದೇ ಮನೆಗಳು ಇಲ್ಲ ಎಂದರೆ ಗೊತ್ತಿಲ್ಲ. ನಾನು 6 ತಿಂಗಳ ಹಿಂದೆ ನಮ್ಮ ನಿವೇಶನಕ್ಕೆ ಹೋಗಿದ್ದೆ. ಆ ಸಮಯದಲ್ಲಿ ಅಲ್ಲಿ ಯಾವುದೇ ಮನೆಗಳು ಇರಲಿಲ್ಲ ಎಂದರೆ ಗಮನಿಸಿಲ್ಲ. ನನ್ನ ವೈಯಕ್ತಿಕ ಮಾಹಿತಿಯಲ್ಲಿ ಇಲ್ಲದೇ ಇರುವ ವಿಷಯವನ್ನು ಪ್ರಮಾಣ ಪತ್ರಿಕೆಯಲ್ಲಿ ಹೇಳಿದ್ದೀರಾ ಎಂದರೆ ಗೊತ್ತಿಲ್ಲ. ನಾನು ಖರೀದಿಸಿದ ನಿವೇಶನ ವಾದಿಯ ಆಸ್ತಿಯಲ್ಲಿ ಬರುತ್ತದೆ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ,**

ಸಹಿ/-

ಪ್ರಧಾನ **ಲಘು ವ್ಯವಹಾರಗಳ ಮತ್ತು** ಸಿವಿಲ್
**ನ್ಯಾಯಾಧೀಶರು (ಹಿ.ವಿ.), ಮೈಸೂರು**